ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ
ನ್ಯಾಯಾಲಯ, ತಿಪಟೂರು

ಸಿ.ಸಿ. ನಂ. **450/2025**

ಸಿ.ಡಬ್ಲ್ಯೂ **:3**
ಪಿ.ಡಬ್ಲ್ಯೂ **:3**

ದಿಃ **28.07.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | : | ಶಂಕರ |
| ತಂದೆ ಹೆಸರು | : | ವಸಂತಕುಮಾರ್ |
| ವಯಸ್ಸು | : | **23** ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ ಸ್ಥಳ | : | ತಿಪಟೂರು |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಆರೋಪಿಗಳ ಪರಿಚಯ ನನಗೆ ಇದೆ. ಅವರೆಲ್ಲರೂ ನಮ್ಮ ಮನೆಯ ಅಕ್ಕ-ಪಕ್ಕದವರು. ಚಾಸಾ-1 ನನ್ನ ಅಜ್ಜಿ , ಚಾಸಾ-2 ನನ್ನ ತಂದೆ. ನನಗೆ ಈ ಕೇಸಿನಲ್ಲಿ ಏನೂ ಗೊತ್ತಿಲ್ಲ. ಆರೋಪಿಗಳು ನನ್ನನ್ನಾಗಲೀ, ನನ್ನ ಅಜ್ಜಿಯಾನ್ನಗಲೀ ಮತ್ತು ನನ್ನ ತಂದೆಗಾಗಲೀ ಯಾವುದೇ ಅಕ್ರಮ ತಡೆ ಮಾಡಿ ಪ್ರಾಣ ಬೆದರಿಕೆ ಹಾಕಿ ಕೆಟ್ಟ ಭಾಷೆಯಲ್ಲಿ ಬೈದು ಹಲ್ಲೆ ಮಾಡಿರುವುದಿಲ್ಲ. ಈ ಸಂಬಂಧವಾಗಿ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(**ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು**)**

ಸಿ.ಸಿ. ನಂ. **450/2025**

<u>ಪಾಟೀ ಸವಾಲು ಮಾನ್ಯ ಎಪಿಪಿ ರವರಿಂದಃ-</u>

ದಿಃ 31.03.2025 ರಂದು ರಾತ್ರಿ 11.30 ಗಂಟೆ ಸಮಯದಲ್ಲಿ ಈ ಕೇಸಿನ ಆರೋಪಿಗಳು ನನ್ನ ಮೇಲೆ ಗಲಾಟೆ ಮಾಡುತ್ತಿರುವ ವಿಚಾರ ತಿಳಿದು ನನ್ನ ತಂದೆ, ತಾಯಿ ಮತ್ತು ಅಜ್ಜಿ ಜಗಳ ಬಿಡಿಸಲು ಬಂದಾಗ ಅವರಿಗೂ ಸಹ ಕೈಗಳಿಂದ ಹಲ್ಲೆ ಮಾಡಿ ನನ್ನ ತಂದೆಗೆ ಕೈಗಳಿಂದ ಹೊಡೆದು ರಸ್ತೆಯಲ್ಲಿ ಕೆಳಗೆ ಕೆಡವಿ ಹಲ್ಲೆ ಮಾಡಿದ್ದಲ್ಲದೇ, ಅಕ್ರಮವಾಗಿ ತಡೆದು ಪ್ರಾಣ ಬೆದರಿಕೆಯನ್ನು ಹಾಕಿ ಅವಾಚ್ಯವಾಗಿ ನಿಂದಿಸಿದ ಹಿನ್ನೆಲೆಯಲ್ಲಿ ಈಗ ಓದಿಸಿ ಕೇಳಿಸಿಕೊಂಡ ನಿಪಿ-7 ರ ಪ್ರಕಾರ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಆರೋಪಿತರ ಪರ ವಕೀಲರಿಂದ ಪಾಟೀ ಸವಾಲು ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

Sd/-

(ವರದರಾಜ್ ಬಿ.)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.